ಹೋಗತಕ್ಕಂಥಾದ್ದು ಇಲ್ಲ, the only such of the clubs where these unlawful activites are going on, ಅದಕ್ಕೆ ಸಂಬಂಧಪಟ್ಟಹಾಗೆ ಸೀಮಿತವಾಗಿ ನಾವು ಹೋಗುತ್ತಿದ್ದೇವೆ. ಇದಕ್ಕೆ ಕ್ರಮವನ್ನು ಕೈಗೊಂಡಿದ್ದೇವೆ. ಪೋಲೀಸರಿಗೆ ಆದೇಶವನ್ನು ಕೊಟ್ಟಿದ್ದೇವೆ. ಎಲ್ಲಿ ಈ ತರಹ ಫ್ರೀಕ್ವೆಂಟಾಗಿರತಕ್ಕ ವೈಲೇಷನ್ ನಡೆಯುತ್ತವೆ, ಆಗ, ಅಲ್ಲಿರತಕ್ಕ ಬಾರ್ ಲೈಸೆನ್ಸ್ ಕ್ಯಾನ್ಸಲ್ ಮಾಡುತ್ತೇವೆ, ಸಮಯಬಂದರೆ ಬಹುಶಃ ನಾನು ಹೇಳುತ್ತೇನೆ, ಅವರಿಗೆ ಕೊಟ್ಟಿರತಕ್ಕ ಪರವಾನಗಿಯನ್ನೂ ಸಹ ರದ್ದು ಮಾಡಿ, ಈ ತರಹ ಚಟುವಟಿಕೆಗಳು ನಡೆಯದಂತೆ ಮಾಡುವ ಜವಾಬ್ದಾರಿ ಸರ್ಕಾರದ್ದು ಎಂದು ಈ ಸಂದರ್ಭದಲ್ಲಿ ಹೇಳುತ್ತೇವೆ. ನಾವು ಈಗಾಗಲೇ ಪೋಲೀಸ್ ಇಲಾಖೆಯವರಿಗೆ ಆದೇಶ ಕೊಟ್ಟಿದ್ದೇವೆ. ಇದನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವ ಜವಾಬ್ದಾರಿಕೆ ನಮ್ಮದು ಮತ್ತು ನಿಮ್ಮೆಲ್ಲರದ್ದು. ಮತ್ತೆ ಕ್ಲಿಪಿಂಗ್ಸ್ ವಿಷಯದಲ್ಲಿ, ಅದು ಯಾರು ಎಂಬುದನ್ನು ತನಿಖೆ ಮಾಡಿಸಬೇಕಾಗುತ್ತದೆ. ಪೇಪರಿನಲ್ಲಿ ಬಂದಿರತಕ್ಕ ಹೇಳಿಕೆ, ಲೆಜಿಸ್ಲೇಟರ್ಸ್ ಇದ್ದಾರೆ, ಇಲ್ಲಿ ಪೋಲೀಸ್ ಆಫೀಸರ್ಸ್ ಇದ್ದಾರೆ. ವೀಡಿಯೋ ಕ್ಲಿಪಿಂಗ್ಸ್ ಇದ್ದಾವೆಂದು ಬ್ಲಾಕ್ ಮೇಲ್ ಮಾಡತಕ್ಕ ತಂತ್ರ ಆಗಬಾರದು. ಅಲ್ಲಿ ಬ್ಲಾಕ್ ಮೇಲ್ ಮಾಡತಕ್ಕ ತಂತ್ರ ಇರಲಿಕ್ಕೂ ಸಾಕು. ಆದ್ದರಿಂದ, ನೀವು ಅದನ್ನು ಗಮನಕ್ಕೆ ತಂದಿದ್ದೀರಿ. ನಾವು ಅದನ್ನೂ ಕೂಡ ತನಿಖೆ ಮಾಡಿ, ಯಾರು ಹೇಳಿಕೆ ಕೊಟ್ಟಿದ್ದಾರೆಂಬುದನ್ನು ಕಂಡು ಹಿಡಿದು, ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂದು ಮುಂದು ನೋಡುವುದಿಲ್ಲವೆಂದು ಹೇಳಿ, ನಿಮಗೆ ಈ ಭರವಸೆಯನ್ನು ಸರ್ಕಾರದ ವತಿಯಿಂದ ಕೊಡುತ್ತಿದ್ದೇನೆ.

(ಜ) ಬಾಗೂರು ನವಿಲೆ ಸುರಂಗದ ಬಗ್ಗೆ ನಡೆಯುತ್ತಿರುವ ಚಳುವಳಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಸನ್ಮಾನ್ಯ ಉಪಾಧ್ಯಕ್ಷರೇ, ಸದನದಲ್ಲಿ ಎರಡು ದಿನದಿಂದಲೂ ಚರ್ಚೆಯಾಗಿದೆ. ಬಾಗೂರು ನವಿಲೆ ಸುರಂಗದಲ್ಲಿ ಸುಮಾರು 94 ದಿನಗಳ ಕಾಲ ಚಳುವಳಿ ಮಾಡಿದ್ದು ಅದರ ಮೇಲೆ ಪೋಲೀಸಿನವರ ಹೆರ್ಯಾಸ್‌ಮೆಂಟಾಗಿ, ಗ್ರಾಮಾಂತರ ಪ್ರದೇಶದ ಎಲ್ಲಾ ಜನರಿಗೂ ಸುಮಾರು 8-10 ಹಳ್ಳಿ, ರೈತರು, ರೈತ ಮಹಿಳೆಯರು, ಅಂಗಡಿಗಳನ್ನು ಧಾಳಿ ಮಾಡಿ ಬಹಳ ಅನಾನುಕೂಲವಾಗಿದ್ದು, ನಂತರ ಗಾಂಧಿ ಪ್ರತಿಮೆ ಮುಂದೆ ಸುಮಾರು 13-14 ದಿನಗಳಿಂದ ಧರಣಿ ಮಾಡುತ್ತಿದ್ದಾರೆ. ದಯವಿಟ್ಟು ಸರ್ಕಾರ ಮಧ್ಯಪ್ರವೇಶ ಮಾಡಿ, ಅವರನ್ನು ಕರೆದು ಮಾತುಕತೆಯಾಡಬೇಕು. ಎರಡನೆಯದು, ನಾವೆಲ್ಲರೂ ಹೋಗಿದ್ದೇವೆ. ರಾಜಕಾರಣ ಮಾಡುವ ದೃಷ್ಟಿಯಿಂದ ನಾವು ಮಾತನಾಡುತ್ತಾ ಇಲ್ಲ. ನೇರವಾಗಿ ಎಲ್ಲಾ ಹಳ್ಳಿಯನ್ನು ನೋಡಿ ಬಂದಿದ್ದೇವೆ. ಬಹಳ ಕೆಳಮಟ್ಟದ ಪೋಲೀಸ್ ದೌರ್ಜನ್ಯ ನಡೆದಿದೆ. ಅದರ ಮೇಲೆ ಕ್ರಮ ತೆಗೆದುಕೊಳ್ಳತಕ್ಕ ಎರಡು ಕೆಲಸವನ್ನು ಸರ್ಕಾರ ಮಾಡಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ಬಹಳ ಮುಖ್ಯವಾದ ವಿಷಯ.

ಉಪಾಧ್ಯಕ್ಷರು: ತಾವು ಪದೇ ಪದೇ ಎದ್ದು ನಿಂತು ಈ ರೀತಿ ಮಾಡಿದರೆ ಹೇಗೆ? ಇಲ್ಲಿ ಸುಮಾರು ಪ್ರಶ್ನೆಗಳು ಇವೆ. ಎಲ್ಲಾ ಪ್ರಶ್ನೆಗಳಿಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ಬಾಗೂರುನವಿಲೆದ್ದು ಪೋಲೀಸರ ದೌರ್ಜನ್ಯ ಬಹಳ ಜಾಸ್ತಿಯಾಗಿದೆ. ಆ ಬಗ್ಗೆ ತನಿಖೆ ಮಾಡಬೇಕಾಗುತ್ತದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಕ್ಲಬ್ ವಿಷಯ 30 ನಿಮಿಷ ಚರ್ಚೆಯಾಯಿತು. ಇದು ರೈತರಿಗೆ ಸಂಬಂಧಪಟ್ಟಿದ್ದು ಬೇಡ ಅಂದರೆ ಹೇಗೆ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಬಾಗೂರು ನವಿಲೆ ಬಗ್ಗೆ ಎಲ್ಲಾ ವಿಷಯ ಸರ್ಕಾರಕ್ಕೆ ಗೊತ್ತಿದೆ. ಪೋಲೀಸರಿಂದ ಅಲ್ಲಿ ಅತಿ ಕೆಳಮಟ್ಟದ ದೌರ್ಜನ್ಯವಾಗಿದೆ. ಅದರ ಬಗ್ಗೆ ಸಂಪೂರ್ಣವಾದ ತನಿಖೆ ಆಗಬೇಕು. ಮತ್ತು ಅಲ್ಲಿ ರೈತರಿಗೆ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಡಬೇಕು. ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಸರ್ಕಾರ ಕೊಡಬೇಕು ಮತ್ತು ಅವರ ಜೊತೆ ಮಾತುಕತೆ ಮಾಡಿ ಪರ್ಯಾಯ ವ್ಯವಸ್ಥೆ ಮಾಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಬಾಗೂರು ನವಿಲೆ ವಿಷಯ ಸಂಬಂಧಪಟ್ಟ ಹಾಗೆ ಮಾನ್ಯ ಪುಟ್ಟಣ್ಣಯ್ಯನವರು ಪ್ರಸ್ತಾಪ ಮಾಡಿದ್ದು,

ಉಪಾಧ್ಯಕ್ಷರು: ಈಗ ಮಾನ್ಯ ಮಂತ್ರಿಗಳು ಇಲ್ಲ. ಅವರು ಬರಲಿ ಬಂದ ಮೇಲೆ ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಏಕೆ ಇರಬಾರದು? ಮಂತ್ರಿಗಳು ಇರಬೇಕೆಂದು ನಾವು ಎಷ್ಟು ಸಲ ಹೇಳಬೇಕು. ಕೊನೆ ದಿವಸ ಎಂಬುದು ಗೊತ್ತಿದ್ದರೂ ಸಹ ಅತ್ತು ಕರೆದು ಔತಣ ಮಾಡಿಸಿಕೊಳ್ಳಬೇಕೇ?

ಉಪಾಧ್ಯಕ್ಷರು: ಈಗ ದಯಮಾಡಿ ತಾವು ನನ್ನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಿ. ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಬೇಕೆಂದು ಸುಮಾರು 14 ಜನ ಇದ್ದಾರೆ. ಇನ್ನೂ ಅನೇಕ ಬಿಲ್‌ಗಳು ಇವೆ. ಇವತ್ತು ಕೊನೆಯ ದಿವಸ. ಬಿಎಸಿಯಲ್ಲಿ ತಾವು ಇದ್ದೀರಿ, ತಾವೇ ತೀರ್ಮಾನ ಮಾಡಿರತಕ್ಕಂಥಾದ್ದು. ಅದರ ಪ್ರಕಾರ ನಾನು ಈ ಸಭೆಯನ್ನು ನಡೆಸುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಇವತ್ತು ಮುಂಜಾನೆ 9-00 ಗಂಟೆಗೆ ನಾವು ಬಂದಿದ್ದೇವೆ. 10 ಗಂಟೆಗೆ ಇದ್ದರೂ ಸಹ ಮಾನ್ಯ ಅಧ್ಯಕ್ಷರು 9-00

ಗಂಟೆಗೆ ಬರಬೇಕೆಂದು ಹೇಳಿದರು ನಾವು ಬಂದಿದ್ದೇವೆ. ಎಲ್ಲಾ ಬಿಲ್‌ಗಳನ್ನು ಪಾಸ್ ಮಾಡೋಣ. ಶೂನ್ಯ ವೇಳೆಯಲ್ಲಿ ಸದಸ್ಯರು ಎತ್ತಿದಂತಹ ಕೆಲವು ವಿಷಯಗಳಿಗೆ ಉತ್ತರ ಕೊಡತಕ್ಕಂಥವರೂ ಕೂಡ ಇಲ್ಲ ಅಂದರೆ ಹೇಗೆ?

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ಬಹಳಷ್ಟು ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರ ಕೊಟ್ಟಿದ್ದೇವೆ.

ಶ್ರೀ ಮಲ್ಲಿಕಾರ್ಜುನಖರ್ಗೆ: ಮಾನ್ಯ ಅಧ್ಯಕ್ಷರೇ, ಬಾಗೂರು ನವಿಲೆ ವಿಷಯ ಬಹಳ ಮುಖ್ಯವಾದುದು.

ಉಪಾಧ್ಯಕ್ಷರು: ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕಾದವರು ಇನ್ನೂ 24 ಜನ ಶಾಸಕರು ಇದ್ದಾರೆ. ದಯಮಾಡಿ ಎಲ್ಲಾ ಸದಸ್ಯರು ಒಂದೆರಡು ನಿಮಿಷಗಳಲ್ಲಿ ಪ್ರಸ್ತಾಪ ಮಾಡಿ ಮುಗಿಸಿದರೆ ಒಳ್ಳೆಯದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಪ್ರಸ್ತಾಪ ಮಾಡಿದಂತಹ ವಿಷಯಕ್ಕೆ ಸದನದಲ್ಲಿ ಮಾನ್ಯ ಮಂತ್ರಿಗಳಿಂದ ಉತ್ತರ ಸಿಗಬೇಕಲ್ಲಾ. ಅವರು ಪ್ರಸ್ತಾಪ ಮಾಡಿದರು ಕುಳಿತುಕೊಂಡರು, ಇವರು ಪ್ರಸ್ತಾಪ ಮಾಡಿದರು ಕುಳಿತುಕೊಂಡರು. ಇದರ ಅರ್ಥ ಏನು?

ಶ್ರೀ ಸಿದ್ದರಾಮಯ್ಯ: ಬಹಳಷ್ಟು ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ನಾವು ಉತ್ತರ ಕೊಟ್ಟಿದ್ದೇವೆ.

ಶ್ರೀ ಎಚ್.ಎನ್.ನಂಜೇಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಪುಟ್ಟಣ್ಣಯ್ಯನವರು ವಿಷಯ ಪ್ರಸ್ತಾಪ ಮಾಡಿದರು. ಅದಕ್ಕೆ ತಾವು ಉತ್ತರ ಕೊಡಬೇಕು. ತಾವು ಯಾವಾಗ ಮೀಟಿಂಗ್ ನಡೆಸಿದಿರಿ, ಅದನ್ನು ಹೇಳಿ ಅಲ್ಲಿ ಪೋಲೀಸರ ದೌರ್ಜನ್ಯ ಎಕ್ಸಸ್ ಆಗಿದೆ ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು): ಮಾನ್ಯ ಅಧ್ಯಕ್ಷರೇ, ನಾನು ಮೊದಲು ಈ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ನಿಂತಾಗ ಮಾನ್ಯ ಅಧ್ಯಕ್ಷರು ಮಾನ್ಯ ಮಂತ್ರಿಗಳು ಇಲ್ಲ ಅವರನ್ನು ಕರೆಸುತ್ತೇನೆ ಆಮೇಲೆ ಪ್ರಸ್ತಾಪ ಮಾಡಿ ಎಂದು ಹೇಳಿದರು. ಆದ್ದರಿಂದ ನಾನು ಈಗ ಪ್ರಸ್ತಾಪ ಮಾಡುತ್ತಿದ್ದೇನೆ. ಬಾಗೂರು ನವಿಲೆ ಸುರಂಗ ಮಾರ್ಗದಿಂದ ಹಾನಿಗೆ ಒಳಗಾದ ಹಳ್ಳಿಗಳ ರೈತರು ಪ್ರತಿಭಟನೆ ಮಾಡುತ್ತಾ ಇರತಕ್ಕಂಥಾದ್ದು, ಸರ್ಕಾರಕ್ಕೆ ಗೊತ್ತಿದೆ. ಪ್ರತಿಭಟನೆ ಮಾಡುತ್ತಾ ಇರತಕ್ಕಂಥ ರೈತರ ಮನೆಗಳಿಗೆ ನುಗ್ಗಿ ಅಮಾಯಕ ರೈತರ ಮನೆಗಳ ಮೇಲೆ ಪೋಲೀಸರು ಧಾಳಿಮಾಡಿ ಬಹಳ ದೌರ್ಜನ್ಯ ಮಾಡಿರತಕ್ಕಂಥಾ ವಿಷಯ ಸರ್ಕಾರದ ಗಮನದಲ್ಲಿ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಕ್ಕಳ ಮೇಲೆ ಮಹಿಳೆಯರ ಮೇಲೆ ಮುದುಕರ ಮೇಲೆ

ಮತ್ತು ಅದರ ಜೊತೆಗೆ ಅಂಗವಿಕಲರ ಮೇಲೆ ಅವರ ಮನೆಗೆ ನುಗ್ಗಿ ಪೋಲೀಸರು ಹೊಡೆದಿದ್ದಾರೆ. ಈ ಮಾತನ್ನು ಜಿಲ್ಲಾಧಿಕಾರಿಗಳೇ ಹೇಳಿದ್ದಾರೆ. ಪೋಲೀಸ್ ದೌರ್ಜನ್ಯ ಎಕ್ಸಸ್ ಆಗಿದೆ ಎಂದು ಹೇಳಿ, ಸರ್ಕಾರಕ್ಕೆ ಹೇಳಿದ್ದಾರೆ. ಇಷ್ಟೆಲ್ಲಾ ಆದರೂ ಕೂಡ ಸರ್ಕಾರದವರು ಮೂಕ ಪ್ರೇಕ್ಷಕರಾಗಿದ್ದಾರೆ. ದೌರ್ಜನ್ಯ ನಡೆದ ಸ್ಥಳಗಳಿಗೆ ಯಾರೂ ಭೇಟಿ ಕೊಟ್ಟಿಲ್ಲ. ದೌರ್ಜನ್ಯ ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಒಂದು ಸದನದ ಸಮಿತಿಯನ್ನು ನೇಮಕ ಮಾಡಿ ಅಲ್ಲಿ ಏನು ಪೋಲೀಸ್ ದೌರ್ಜನ್ಯದಿಂದ ಅನ್ಯಾಯವಾಗಿದೆ, ಅದರ ಜೊತೆಗೆ ಅವರಿಗೆ ಕೊಡಬೇಕಾದ ಪರಿಹಾರ ಕೊಡಬೇಕು, ಮತ್ತು ಅವರ ಬೇಡಿಕೆಗಳ ಬಗ್ಗೆ ಕೂಡ ಸದನದ ಸಮಿತಿಯಿಂದ ತನಿಖೆ ಮಾಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಿನ್ನೆಲೆಯಲ್ಲಿ ಬಾಗೂರು ನವಿಲೆ ಸುರಂಗ ಮಾರ್ಗದ ರೈತರ ಮುಷ್ಕರದ ಹಿನ್ನೆಲೆಯಲ್ಲಿ ರೈತರ ಬೆಳೆಗಳಿಗೆ ಹಾನಿ ಆಗಿದೆ ಅವರಿಗೆ ಪರಿಹಾರ ಕೊಡಬೇಕೆಂದು ಹೇಳಿ, 15-4-98ರಿಂದ ಚಳುವಳಿಗಾರರು ಚಳುವಳಿಯನ್ನು ಮಾಡಿದ್ದಾರೆ. ನಾನು ಮತ್ತು ಮುಖ್ಯಮಂತ್ರಿಗಳು ಇಬ್ಬರೂ ಕೂಡ ಪ್ರತ್ಯೇಕವಾಗಿ ಎರಡು ಸಭೆಗಳನ್ನು ನಡೆಸಿ ಎಲ್ಲಾ ವಿಚಾರಗಳನ್ನು ಅವರಿಗೆ ಸ್ಪಷ್ಟ ಮಾಡಿದ್ದೇವೆ. ಇವತ್ತು ಕೂಡ ಚಳುವಳಿ ಮುಂದುವರಿದಿದೆ. ಪೋಲೀಸ್‌ನವರ ಸ್ಟೇಟ್‌ಮೆಂಟ್ ನನ್ನ ಹತ್ತಿರ ಇದೆ. ಆ ಸ್ಟೇಟ್‌ಮೆಂಟ್ ಬಗ್ಗೆ ನಾನು ವಿವರವಾಗಿ ಹೇಳುವುದಕ್ಕಿಂತ ಮುಂಚಿತವಾಗಿ ಮಾನ್ಯ ಸದಸ್ಯರಾದ ನಂಜೇಗೌಡರು ಹೇಳಿದ ರೀತಿಯಲ್ಲಿ ಒಂದು ದಿನಾಂಕವನ್ನು ನಿಗದಿ ಮಾಡುತ್ತೇನೆ. 16-11-98ರಂದು ಅಥವಾ 17-11-98ರಂದು ನಾನು ಮತ್ತು ಮಾನ್ಯ ಗೃಹಸಚಿವರು ಇಬ್ಬರೂ ಸಾಧ್ಯವಾದರೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡುತ್ತೇವೆ, ಈಗ ಅವರು ಏನು ಮುಷ್ಕರ ಮಾಡುತ್ತಿದ್ದಾರೆ ಆ ಮುಷ್ಕರವನ್ನು ದಯವಿಟ್ಟು ಅವರು ನಿಲ್ಲಿಸಲಿ. ಅವರು ಸೋಮವಾರ ಅಥವಾ ಮಂಗಳವಾರ ಮಾತುಕತೆಗೆ ಬರಲಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಒಂದು ಸ್ಪಷ್ಟವಾದ ದಿನಾಂಕವನ್ನು ಹೇಳಿ.

ಶ್ರೀ ಕೆ.ಎನ್.ನಾಗೇಗೌಡ: ಆಯಿತು ಸೋಮವಾರವೇ ಅವರು ಮಾತುಕತೆಗೆ ಬರಲಿ. ನಾನು ಈ ಸದನದ ಮುಖಾಂತರ ಅವರಿಗೆ ಮನವಿಯನ್ನು ಮಾಡುತ್ತಿದ್ದೇನೆ. ಮಾನ್ಯ ಸದಸ್ಯರುಗಳೇ ಹೋಗಿ ಸರ್ಕಾರದ ನಿಲುವನ್ನು ಆ ಚಳುವಳಿಗಾರರಿಗೆ ತಿಳಿಸಲಿ. ಅವರು ದಯವಿಟ್ಟು ಸೋಮವಾರ ಮಾತುಕತೆಗೆ ಬರಲಿ. ಎಲ್ಲಾ ವಿಷಯಗಳನ್ನು ಕುಳಿತುಕೊಂಡು ಕೂಲಂಕಷವಾಗಿ ಚರ್ಚೆ ಮಾಡೋಣ. ಮಾನ್ಯ ಸದಸ್ಯರಾದ ನಂಜೇಗೌಡರು ಒಂದು ಸಲಹೆ ಕೊಟ್ಟರು. ನಾವು ಚರ್ಚೆ ಮಾಡುವಾಗ ಏಕೆಂದರೆ

ಅದು ನಾಳೆ ತಪ್ಪಾಗಬಾರದು. ನೂರು ಮೀಟರ್‌ಗಳನ್ನು ಎರಡೂ ಕಡೆ ಅಕ್ಕೆರ್ ಮಾಡಿಕೊಂಡು ಅವರಿಗೆ ಪರಿಹಾರ ಕೊಡಬೇಕು ಮತ್ತು ಎಲ್ಲಿ ಪೋಲೀಸ್ ದೌರ್ಜನ್ಯ ಆಗಿದೆ ಯಾವ ರೀತಿಯಿಂದ ನಡೆದಿದೆ ಎನ್ನುವುದನ್ನು ಖುದ್ದಾಗಿ ಅವರಿಂದಲೂ ಕೇಳೋಣ. ನಾನು ಗೃಹ ಇಲಾಖೆಯ ಕಾರ್ಯದರ್ಶಿಯನ್ನು ಕರೆಸುತ್ತೇನೆ, ಮತ್ತು ಮಾನ್ಯ ಗೃಹ ಸಚಿವರು ಇರುತ್ತಾರೆ, ನಾನು ಇರುತ್ತೇನೆ. ನಾವು ಅವರು ಕುಳಿತುಕೊಂಡು ಮಾತುಕತೆ ಮಾಡಿ, ಏನು ಒಂದು ಪರಿಹಾರ ಕಂಡು ಹಿಡಿಯಬೇಕು ಎನ್ನುವುದಕ್ಕೆ ಸೋಮವಾರ ನಾವು ದಿನಾಂಕ ನಿಗದಿ ಮಾಡಿದ್ದೇವೆ, ಆದ್ದರಿಂದ ತಾವು ದಯವಿಟ್ಟು ಮುಷ್ಕರ ನಿಲ್ಲಿಸಿ ಸರ್ಕಾರದ ಜೊತೆಗೆ ಮಾತುಕತೆಗೆ ಬರಬೇಕೆಂದು ನಾನು ಮತ್ತೊಮ್ಮೆ ಈ ಸದನದ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಈ ಬಗ್ಗೆ ಇನ್ನು ಹೆಚ್ಚು ಚರ್ಚೆ ಮಾಡುವುದು ಬೇಡ ಎಂದು ನಾನು ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎ.ಟಿ.ರಾಮಸ್ವಾಮಿ: ಮಾನ್ಯ ಅಧ್ಯಕ್ಷರೇ, ಅಲ್ಲಿ ಪೋಲೀಸ್ ದೌರ್ಜನ್ಯ ಜಾಸ್ತಿ ಆಗಿದೆ. ತಾವು ಒಂದು ಸದನದ ಸಮಿತಿಯನ್ನು ಸಿರಾಕ್ಕೆ ಮಾಡಿದ್ದೀರಲ್ಲಾ, ಅದೇ ಸದನ ಸಮಿತಿ ಅಲ್ಲಿ ಹೋಗಿ ತನಿಖೆ ಮಾಡಲಿ.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಅಧ್ಯಕ್ಷರೇ, ಸದನದ ಸಮಿತಿ ಅವಶ್ಯಕತೆ ಇಲ್ಲ. ಸದನದ ಸಮಿತಿಯಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ. ಆ ಸಭೆಗೆ ಬೇಕಾದರೆ ತಾವು ಬನ್ನಿ. ಮಾನ್ಯ ನಂಜೇಗೌಡರು ಬರಲಿ, ಮಾನ್ಯ ಪುಟ್ಟಣ್ಣಯ್ಯನವರು ಬರಲಿ ಮಾನ್ಯ ಶ್ರೀರಾಮರೆಡ್ಡಿಯವರು ಬರಲಿ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಬರಲಿ, ನಾವೆಲ್ಲಾ ಕುಳಿತುಕೊಂಡು ಮಾತುಕತೆಯ ಮೂಲಕ ಸಮಸ್ಯೆಯನ್ನು ಬಗೆಹರಿಸೋಣ.

ಶ್ರೀ ಎ.ಟಿ.ರಾಮಸ್ವಾಮಿ: ಮಾನ್ಯ ಅಧ್ಯಕ್ಷರೇ, ಅವರ ಬೇಡಿಕೆಗಳು ಇದ್ದವು. ಅದರ ಬಗ್ಗೆ ಬೇಕಾದರೆ ತಾವು ಕರೆದು ಚರ್ಚೆ ಮಾಡಿ. ಆದರೆ ಪೋಲೀಸ್ ದೌರ್ಜನ್ಯ ಏನಾಗಿದೆ ಅದನ್ನು ಹಾಸನ ಜಿಲ್ಲಾದಿಕಾರಿಯವರೇ ಒಪ್ಪಿಕೊಂಡಿದ್ದಾರೆ. ಅವರು ಸರ್ಕಾರಕ್ಕೆ ಈ ವಿಷಯ ತಿಳಿಸಿದ್ದಾರೆ. ಅದರ ಬಗ್ಗೆ ಕರೆದು ಮಾತನಾಡುವುದಕ್ಕೆ ಆಗುತ್ತದೆಯೇ? ಆ ಬಗ್ಗೆ ತನಿಖೆ ಮಾಡಿಸಬೇಡವೇ?

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಅಧ್ಯಕ್ಷರೇ, ದಿನಾಂಕ 19-7-98ರಿಂದ ರೈತರ ಅಡೆತಡೆಗಳನ್ನು ನಿವಾರಿಸುತ್ತಾ, ಅದೇ ದಿನ ಸುಮಾರು 150 ಜನ ರೈತರು ಸ್ವಇಚ್ಛೆಯಿಂದ ಬಂಧನಕ್ಕೆ ಒಳಗಾಗಿದ್ದಾರೆ ಎನ್ನತಕ್ಕಂಥ ವರದಿ ಸಹ ನನ್ನಲ್ಲಿ ಇದೆ. ಅಲ್ಲಿ 144ನೇ ವಿಧಿಯನ್ನು ಹಾಕಿದಾಗ ಯಾರೋ ಸ್ಕೂಟರ್ಸ್ ಮೇಲೆ ಬಂದು ಗಲಾಟೆ ಮಾಡಿದರು ಎನ್ನತಕ್ಕಂಥಾದ್ದು ಇದೆ. ಅವರನ್ನು ಕರೆದು ಕೇಳೋಣ. ಅವರಿಂದ ಈ ದೌರ್ಜನ್ಯ ನಡೆದಿದೆ ಎಂದು ಕಂಡು ಬಂದರೆ, ಅದರಲ್ಲಿ ಸತ್ಯಾಂಶ ಇದೆ ಎಂದು ಕಂಡು ಬಂದರೆ ಸರ್ಕಾರ ಯಾವುದೇ ರೀತಿಯ ವಿಚಾರಣೆಗೆ ಹಿಂದುಮುಂದು ನೋಡುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಹಾಸನ ಜಿಲ್ಲಾಧಿಕಾರಿಗಳೇ ಹೇಳಿದ್ದಾರೆ. ಪೋಲೀಸ್ ದೌರ್ಜನ್ಯ ಸ್ವಲ್ಪ ಎಕ್ಸಸ್ ಆಗಿದೆ ಎಂದು.

ಶ್ರೀ ಕೆ.ಎನ್.ನಾಗೇಗೌಡ ; ಜಿಲ್ಲಾಧಿಕಾರಿಗಳನ್ನು ಕರೆಸುತ್ತೇನೆ. ನೀವು ಬನ್ನಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ ; ನಾನು ಒಂಭತ್ತು ಹಳ್ಳಿಗಳಿಗೆ ಹೋಗಿ ವಿಚಾರಿಸಿಕೊಂಡು ಬಂದಿದ್ದೇನೆ.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಅಧ್ಯಕ್ಷರೇ, ನಾವೂ ಮೀಟಿಂಗ್ ಮಾಡಿದ್ದೇವೆ. ಆ ಸಭೆಯಲ್ಲಿ ಜಿಲ್ಲಾಧಿಕಾರಿಗಳು ಇದ್ದರು, ರೈತ ಪ್ರತಿನಿಧಿಗಳೂ ಇದ್ದರು, ನಾವು ಮೀಟಿಂಗ್ ಬೆಂಗಳೂರಿನಲ್ಲಿಯೇ ಮಾಡಿದ್ದೇವೆ. ಇಲ್ಲಿ ಮಾಡಬಾರದು ಎಂದು ಇದೆಯೇ? ಆ ಊರಿನಲ್ಲಿ ಹೋಗಿ ಮಾಡಬೇಕೇ? ದಯವಿಟ್ಟು ಅವರು ಮುಷ್ಕರ ನಿಲ್ಲಿಸಿ ಸೋಮವಾರ ಮಾತುಕತೆಗೆ ಬರಲಿ. ಜಿಲ್ಲಾಧಿಕಾರಿಗಳನ್ನು ಕರೆಸೋಣ. ಎಲ್ಲರೂ ಬರಲಿ. ಅವರ ಸಮಸ್ಯೆಗಳನ್ನು ಪರಿಹಾರ ಮಾಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಇಲ್ಲಿ ಎರಡು ವಿಚಾರಗಳು ಇವೆ. ರೈತರಿಗೆ ಪರಿಹಾರ ಕೊಡುವ ಒಂದು ವಿಷಯ ಅದು ಬೇರೆ. ಕಾನೂನು ಪ್ರಕಾರ ಕೊಡಬೇಕೋ ಬೇಡವೋ, ಯಾವ ರೀತಿಯಲ್ಲಿ ಕೊಡಬೇಕು, ಇಲ್ಲಿ ಪರಿಹಾರ ಕೊಟ್ಟರೆ ಬೇರೆ ಕಡೆ ಇದರ ಪರಿಣಾಮ ಏನಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿ ಬೇಕಾದರೆ ನೀವು ಚರ್ಚೆಗೆ ಕರೆದು ತೀರ್ಮಾನ ತೆಗೆದುಕೊಳ್ಳಿ. ಆದರೆ ಪೋಲೀಸ್‌ನವರ ದೌರ್ಜನ್ಯ ಇಲ್ಲಿ ಎಕ್ಸಸ್ ಆಗಿದೆ. ಇದರ ಬಗ್ಗೆ ತಾವು ಏನಾದರೂ ಒಂದು ಕ್ರಮ ಜರುಗಿಸಬೇಕಲ್ಲವೇ? ಎಲ್ಲಾ ಟೀಮ್‌ಗಳು, ತಮ್ಮ ಸರ್ಕಾರಿ ಅಧಿಕಾರಿಗಳು ಹೇಳುತ್ತಾರೆ. ಬೇರೆ ಪಕ್ಷದವರು ಯಾರ್ಯಾರು ಅಲ್ಲಿಗೆ ಭೇಟಿ ನೀಡಿದ್ದರು ಅವರು ಹೇಳುತ್ತಾರೆ. ಆಮೇಲೆ ಮಹಿಳೆಯರ ಮೇಲೆ ದೌರ್ಜನ್ಯಗಳು ಆಗಿವೆ ಎಂದು ಅಲ್ಲಿಗೆ ಬಂದಿದ್ದ ಸಮಿತಿಯವರೂ ಕೂಡ ಹೇಳುತ್ತಾರೆ.

5.00 ಪಿ.ಎಂ

ಈಗ ಇಷ್ಟೊಂದು ಜನ ಮಾನ್ಯ ಸದಸ್ಯರುಗಳು ಹೇಳುತ್ತಿದ್ದಾರೆ ಅಂದರೆ ಅದರಲ್ಲಿ ಸತ್ಯಾಂಶವಿರುತ್ತದೆ. ಈಗಾಗಲೇ ಶಿರಾ ಘಟನೆಯ ವರದಿಯನ್ನು ಸಲ್ಲಿಸಲು ಜಂಟಿ ಸದನದ ಸಮಿತಿಯನ್ನು ಸದನವು ರಚಿಸಿದೆ. ಅದೇ ಸಮಿತಿಗೆ ಬಾಗೂರು ನವಿಲೆ ಪ್ರದೇಶದಲ್ಲಿ ನಡೆಯಿತೆನ್ನಲಾದ ಪೋಲೀಸ್ ಎಕ್ಸ್‌ಸ್ ಬಗ್ಗೆ ನಿಜಾಂಶ ತಿಳಿದು ವರದಿ ಮಾಡುವ ಕೆಲಸವನ್ನು ವಹಿಸಿಕೊಡಿ. ಸಮಿತಿಯವರು ಅಲ್ಲಿ ಪೋಲೀಸ್ ಎಕ್ಸೆಸ್ ನಡೆದಿರುವುದು ಹೌದು ಎಂದಾದರೆ ಮುಂದಿನ ಕ್ರಮ ಏನೆಂದು ನಿರ್ಧರಿಸಬಹುದು, ಇಲ್ಲ ಅಂದರೆ ವಿಷಯವನ್ನು ಅಲ್ಲಿಗೆ ಬಿಟ್ಟು ಬಿಡಬಹುದು.

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೇ, ಶಿರಾ ವಿಚಾರವೇ ಬೇರೆ, ಬಾಗೂರು ನವಿಲೆ ವಿಚಾರವೇ ಬೇರೆ. ನಾನು ಗೃಹಇಲಾಖೆಯಿಂದ ಬಂದಿರತಕ್ಕಂಥ ಸ್ಟೇಟ್‌ಮೆಂಟ್‌ನ್ನು ನಾನು ಇಲ್ಲಿ ಓದಲಿಲ್ಲ. ಗೃಹಸಚಿವರಿಂದ ಕೇಳಿಕೊಂಡು ನಂತರ ಸ್ಟೇಟ್‌ಮೆಂಟ್ ಮಾಡಬಹುದಾಗಿತ್ತು. ಆದ್ದರಿಂದ ಶಿರಾದ ಘಟನೆಗೂ ಇದಕ್ಕೂ ಹೋಲಿಸಬೇಡಿ. ಮಾನ್ಯ ಪುಟ್ಟಣ್ಣಯ್ಯನವರು ಮತ್ತು ತಾವುಗಳೆಲ್ಲರೂ ಸೋಮವಾರದ ದಿವಸ ಮಾತುಕತೆಗೆ ಬನ್ನಿ. ಅಲ್ಲಿ ನಿಜವಾಗಿಯೂ ಪೋಲೀಸ್ ಎಕ್ಸೆಸ್ ನಡೆದಿದೆ ಎಂಬ ವಿಚಾರ ಮಾತುಕತೆಯಲ್ಲಿ ಬಂದರೆ ಒಂದು ಒಟ್ಟಾರೆ ಅಭಿಪ್ರಾಯಕ್ಕೆ ಬರೋಣ. ಅದರ ಮೂಲಕ ಒಂದು ಕ್ರಮವನ್ನು ಸೂಚಿಸೋಣ. ಆದ್ದರಿಂದ ಸುಮ್ಮನೆ ಸದನ ಸಮಿತಿಯ ಅವಶ್ಯಕತೆ ಇಲ್ಲ.

ಶ್ರೀ ಎ.ಟಿ.ರಾಮಸ್ವಾಮಿ: ತಾವುಗಳು ಬೇಡಿಗಳ ಬಗ್ಗೆ ನಮ್ಮೆಲ್ಲರನ್ನು ಕರೆದು ಮಾತನಾಡಿ. ಆದರೆ ಪೋಲೀಸ್ ಎಕ್ಸೆಸ್ ಬಗ್ಗೆ ಏನು ಮಾಡುತ್ತೀರೆಂಬುದನ್ನು ಹೇಳಬೇಕು.

ಉಪಾಧ್ಯಕ್ಷರು: ರಾಮಸ್ವಾಮಿಯವರೇ, ತಾವುಗಳು ಜೀರೋ ಅವರ್‌ನಲ್ಲಿ ಹೀಗೆ ಚರ್ಚೆ ಮಾಡಲು ಪ್ರಾರಂಭಿಸಿದರೆ ನಾವು ಸಭೆಯನ್ನು ಹೇಗೆ ನಡೆಸಬೇಕೆಂಬುದನ್ನು ಹೇಳಿ. ಬಿಎಸಿಯಲ್ಲಿ ಎಲ್ಲಾ ಬಿಲ್‌ಗಳನ್ನು ಪಾಸ್ ಮಾಡಿ ಅದು ಕೌನ್ಸಿಲ್‌ಗೆ ಹೋಗಬೇಕು ಎಂದು ಮಾಡಿದ್ದೇವೆ. ತಾವುಗಳು ಹೀಗೆ ಮಾಡಿದರೆ ಹೇಗೆ?...

ಶ್ರೀ ಎ.ಟಿ.ರಾಮಸ್ವಾಮಿ: ಮಾನ್ಯ ಉಪಾಧ್ಯಕ್ಷರೇ, ಸರಕಾರದ ಉತ್ತರದಿಂದ ನನಗೆ ಸಮಾಧಾನವಾಗಿಲ್ಲ. ಈ ಉತ್ತರವನ್ನು ಪ್ರತಿಭಟಿಸಿ ನಾನು ಧರಣಿ ಮಾಡುತ್ತೇನೆ.

(ಮಾನ್ಯ ಸದಸ್ಯ ಶ್ರೀ ಎ.ಟಿ.ರಾಮಸ್ವಾಮಿಯವರು ಭಾವಿಯಲ್ಲಿ ಧರಣಿ ಕುಳಿತರು)

ಉಪಾಧ್ಯಕ್ಷರು: ಸಚಿವರು ಉತ್ತರ ಕೊಟ್ಟಮೇಲೆಯೂ ನೀವು ಈ ರೀತಿ ಮಾಡಿದರೆ ಹೇಗೆ ಕಲಾಪಗಳನ್ನು ಮಾಡುವುದು?... ಖರ್ಗೆಯವರೇ ನೀವು ಹೇಳಿ....

ಶ್ರೀ ಸಿದ್ಧರಾಮಯ್ಯ (ಉಪ-ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ಎದ್ದು ನಿಂತು ಸರಕಾರಕ್ಕೆ ಈಗಲೇ ಉತ್ತರ ಕೊಡಬೇಕು, ಈಗಲೇ ಕ್ರಮ ತೆಗೆದುಕೊಳ್ಳಿ ಎಂದು ಪ್ರತಿಭಟಿಸಿದರೆ ಹೇಗೆ? ಮಾನ್ಯ ಸದಸ್ಯರು ಸದನಕ್ಕೆ ಹೊಸಬರಲ್ಲ ತಮಗೆ ಎಲ್ಲಾ ವಿಚಾರಗಳೂ ಮತ್ತು ಸಂಪ್ರದಾಯಗಳೂ ಗೊತ್ತಿವೆ. ತಾವುಗಳು ಹೇಳಿದ ವಿಚಾರವನ್ನೂ ಮಾತುಕತೆಯ ಸಂದರ್ಭದಲ್ಲಿ ಚರ್ಚಿಸಿ ಒಂದು ಅಭಿಪ್ರಾಯಕ್ಕೆ ಬನ್ನಿ.

ಶ್ರೀ ಕೆ.ಎನ್.ನಾಗೇಗೌಡ: ರಾಮಸ್ವಾಮಿಯವರು ಮಾತುಕತೆಗೆ ಬರಬೇಕು. ಅಲ್ಲಿ ಪೋಲೀಸ್ ದೌರ್ಜನ್ಯ ನಡೆದಿದ್ದರೆ ಅದು ಯಾವರೀತಿಯಲ್ಲಿ ನಡೆಯಿತು ಎಂಬ ಬಗ್ಗೆ ಚರ್ಚಿಸೋಣ. ಎರಡೂ ಭಾಗದ ವಿಷಯಗಳಿಗೂ ಪರಿಹಾರವನ್ನು ಕಂಡು

ಹಿಡಿಯೋಣ. ಸರಕಾರವು ಮಾತುಕತೆ ಮಾಡೋಣ ಎಂದು ಹೇಳಿದ ಮೇಲೆ ಮತ್ತೆ ತಾವುಗಳು ಹೀಗೆ ಮಾಡುವುದು ಸರಿಯೇ?

ಉಪಾಧ್ಯಕ್ಷರು: ತಮ್ಮ ಬೇಡಿಕೆಗಳನ್ನು ಅವರು ಒಪ್ಪಿಕೊಂಡಿದ್ದಾರೆ. ಮಾತುಕತೆಗೆ ಕರೆದಿದ್ದಾರೆ ಎಲ್ಲರೂ ಕುಳಿತುಕೊಂಡು ಸಮಸ್ಯೆಯನ್ನು ಇತ್ಯರ್ಥ ಮಾಡಿಕೊಳ್ಳಿ. ರಾಮಸ್ವಾಮಿಯವರು ತಮ್ಮ ಸ್ಥಾನಕ್ಕೆ ಹೋಗಿ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಯವರು): ಮಾನ್ಯ ಉಪಾಧ್ಯಕ್ಷರೇ, ಮಾನ್ಯ ನಾಗೇಗೌಡರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಪರಿಹಾರ ಕೊಡುವ ವಿಚಾರ ಒಂದು, ಪೋಲೀಸ್ ದೌರ್ಜನ್ಯದ ವಿಚಾರ ಇನ್ನೊಂದು. ಈ ಎರಡೂ ವಿಚಾರಗಳ ಬಗ್ಗೆ ಪರಿಹಾರ ಕಂಡುಕೊಳ್ಳಲು ಎಲ್ಲರೂ ಕುಳಿತು ಮಾತನಾಡೋಣ, ನೀವೂ ಬನ್ನಿ ಎಂದು ರಾಮಸ್ವಾಮಿಯವರಿಗೂ ಹೇಳಿದ್ದಾರೆ. ಅದನ್ನು ಬಿಟ್ಟು ಈಗಲೇ ಕ್ರಮ ತೆಗೆದುಕೊಳ್ಳಿ ಎಂದು ಆಗ್ರಹಪಡಿಸಿದರೆ ಅದು ಸಾಧ್ಯವೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪ-ಮುಖ್ಯಮಂತ್ರಿಯವರಿಗೂ ಗೊತ್ತಿರಬಹುದು. ಈ ಸದನದಲ್ಲಿ ಈ ವಿಚಾರವು ಎರಡು-ಮೂರು ಸಲ ಪ್ರಸ್ತಾಪವಾಗಿದೆ. ಇದಲ್ಲದೆ ಸದನದ ಹೊರಗಡೆ ಕೂಡ ರೈತ ಸಂಘದವರು, ಕಿಸಾನ್ ಸಭಾದವರು ಚಳುವಳಿಯನ್ನೂ ಕೂಡ ಮಾಡಿದ್ದಾರೆ. ಇದಲ್ಲದೆ ಅನೇಕ ಸಂಘ-ಸಂಸ್ಥೆಗಳ ಮುಖಂಡರುಗಳೂ ಕೂಡ ಬಾಗೂರು ನವಿಲೆ ಟೆನಲ್ ಎಂಟೈರ್ ಬೆಲ್ಟ್‌ನಲ್ಲಿ ಏನು ಸುಮಾರು 10-15 ಹಳ್ಳಿಗಳಿಗೆ ಅಲ್ಲಿಗೆ ಭೇಟಿ ಕೊಟ್ಟು ಅಲ್ಲಿ ಏನು ಅನ್ಯಾಯ ಆಗಿದೆ ಅಥವಾ ಯಾವ ಪೋಲೀಸ್ ಅತ್ಯಾಚಾರವಾಗಿದೆ, ಅದರ ಬಗ್ಗೆಯೂ ಕೂಡ ಖಂಡಿಸಿರುವುದು ತಮಗೆಲ್ಲರಿಗೂ ಗೊತ್ತು. ಆದ್ದರಿಂದ ವಿಚಾರವನ್ನು ಹೊಸತಾಗಿ ಇವೊತ್ತೇ ಪ್ರಸ್ತಾಪ ಮಾಡಿ ಸರಕಾರಕ್ಕೆ ಅದರ ಬಗ್ಗೆ ಅರಿವೇ ಇಲ್ಲ, ನಾವು ತರಾತುರಿಯಲ್ಲಿ ಕೇಳಿದ್ದೇವೆ ಎಂಬ ಪ್ರಶ್ನೆ ಇಲ್ಲಿಲ್ಲ. ಈ ವಿಷಯವು ಸದನದೊಳಗೆ ಮತ್ತು ಹೊರಗಡೆ ಈಗಾಗಲೇ ಹಲವಾರು ಬಾರಿ ಪ್ರಸ್ತಾಪವಾಗಿದೆ. ಅಂತೆಯೇ ಪುಟ್ಟಣ್ಣಯ್ಯನವರು, ರಾಮಸ್ವಾಮಿಯವರು, ಶ್ರೀರಾಮರೆಡ್ಡಿಯವರು, ಶಿವರಾಂರವರು ಮತ್ತಿತರ ಅನೇಕರು ತಮ್ಮಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದಕ್ಕಾಗಿ ವಿಷಯವನ್ನು ಇವೊತ್ತೇ ಪ್ರಸ್ತಾಪ ಮಾಡಿದ್ದಾರೆ ಎಂಬ ಭಾವನೆ ಇದ್ದಲ್ಲಿ ಅದನ್ನು ತೆಗೆದುಹಾಕಿರಿ. ಎರಡನೆಯದು ಶಿರಾ ಬರೇ ಅಟ್ರಾಸಿಟೀಸ್ ಆದ್ದರಿಂದ ಪರಿಹಾರ ಹಣವನ್ನು ತಕ್ಷಣ ನಿಗದಿ ಮಾಡಲು ಬರುವುದಿಲ್ಲ ಎಂಬುದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಅದರ ಸಾಧಕ ಬಾಧಕಗಳನ್ನು ಕೂಡ ನೀವು ನೋಡಬೇಕಾಗುತ್ತದೆ. ಬೇರೆ ಕಡೆಗಳಲ್ಲಿಯೂ ಇದೇ ರೀತಿಯಾಗಿ ಆದಾಗ ಏನು ಮಾಡಬೇಕು ಎಂಬ ಬಗ್ಗೆ ಎಲ್ಲಾ ವಿಚಾರ ಮಾಡಬೇಕಾಗುತ್ತದೆ. ಆದರೆ ಆ ವಿಷಯವನ್ನು ನಾವು ಸದ್ಯಕ್ಕೆ ಚರ್ಚೆ ಮಾಡದೇ ಬದಿಗಿಡೋಣ. ಚರ್ಚೆ ಮಾಡಲು ಅವಕಾಶ ಮಾಡಿಕೊಡಿ. ಅದಕ್ಕೆ

ರಾಮಸ್ವಾಮಿಯವರು, ರೈತ ಸಂಘದವರು, ಮತ್ತು ಆ ಭಾಗದ ಎಲ್ಲಾ ಶಾಸಕರುಗಳನ್ನು ಕರೆದು ಮಾತನಾಡಿ. ಪೋಲೀಸ್ ಎಕ್ಸೆಸ್ ಆದ ಬಗ್ಗೆ ಶಿರಾದಲ್ಲಿನ ಘಟನೆಗೆ ಒಂದು ಸದನ ಸಮಿತಿಯನ್ನು ಕಳುಹಿಸಿದ್ದೀರಿ, ಅದೇ ಸದನ ಸಮಿತಿಗೆ ಈ ಕೆಲಸವನ್ನೂ ಕೂಡ ಒಪ್ಪಿಸಿ ಎಂದು ಹೇಳುತ್ತಾ ಇದ್ದೇವೆ. ಹೊಸದಾಗಿ ಸಮಿತಿ ರಚನೆ ಮಾಡಿ ಎಂದು ಹೇಳುತ್ತಿಲ್ಲ. ಅವರು ಅಲ್ಲಿಗೂ ಕೂಡ ಹೋಗಿ ನೋಡಿಕೊಂಡು ಬರುತ್ತಾರೆ. ಸರಿ ಇಲ್ಲವೆಂದರೆ ನೀವು ಡ್ರಾಪ್ ಮಾಡಿ, ಸರಿ ಇದೆಯೆಂದರೆ, ಅದಕ್ಕೆ ಏನಾದರೂ ಪರಿಹಾರವನ್ನು ಕಂಡುಹಿಡಿಯಿರಿ.

ಶ್ರೀ ಕೆ.ಎನ್.ನಾಗೇಗೌಡ: ಸರಕಾರದವರು ಮಾತುಕತೆ ಮಾಡುವುದಿಲ್ಲ ಅಂದರೆ, ಸರಕಾರದವರು ನಿಮ್ಮನ್ನು ಚರ್ಚೆಗೆ ಕರೆಯುವುದಿಲ್ಲ ಅಂದರೆ, ಸಮಿತಿ ಬೇಕು ಸರಕಾರದವರು ಸೂಕ್ತವಾದ ಪರಿಹಾರವನ್ನು ಕಂಡು ಹಿಡಿಯೋಣ ಬನ್ನಿ ಎಂದು ಹೇಳದಿದ್ದರೆ ಸಮಿತಿಯು ಬೇಕಾಗುತ್ತದೆ. ಆದರೆ ಇಲ್ಲಿ ಸಮಿತಿ ಮಾಡುವ ಕೆಲಸವನ್ನು ಸರಕಾರವು ಸೋಮವಾರವೇ ಮಾಡುತ್ತದೆ ಎಂದು ದಿನಾಂಕ ನಿಗದಿ ಮಾಡಿಕೊಟ್ಟರೂ ಕೂಡ ಆಗುವುದಿಲ್ಲವೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಮಗೂ ಪೋಲೀಸ್ ಎಕ್ಸೆಸ್ ಆಗಿರುವುದು ತಿಳಿದಿದೆ. ಅಲ್ಲಿ ಮನೆ ಮನೆಗೂ ಹೋಗಿ ಬಡಿದಿದ್ದಾರೆ, ಈಗ ಸೋಮವಾರ ಚರ್ಚೆ ಮಾಡೋಣ ಎಂಬುದು ನಿಮ್ಮ ವಿಚಾರ. ಆದರೆ ಯಾವುದಾದರೂ ಒಂದು ವರದಿ ಆ ಕುರಿತು ಬೇಡವೇ? ಒಂದು ವರದಿ ಸಿಓಡಿ ಅಥವಾ ಇಂಟಲಿಜೆನ್ಸ್ ಇಲಾಖೆಯಿಂದ ಬರಬೇಕು. ಅಥವಾ ವಿಶೇಷವಾದ ಪೋಲೀಸ್ ದಳ ಕಳುಹಿಸಿ ಅವರ ರಿಪೋರ್ಟ್‌ನ್ನಾದರೂ ತೆಗೆದುಕೊಳ್ಳಬೇಕು. ಇದಾವುದೂ ಇಲ್ಲವಾದಲ್ಲಿ ಸದನದ ಸಮಿತಿಯ ವರದಿಯಾದರೂ ಬೇಕಲ್ಲವೇ? ಅಥೆಂಟಿಕ್ ವರದಿ ಬೇಕಲ್ಲವೇ?

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಅಧ್ಯಕ್ಷರೇ, ಅಲ್ಲಿ 15 ರಿಂದ 19ರ ವರೆಗೆ ಮತ್ತು 20ನೇ ತಾರೀಖಿಗೆ ಏನು ನಡೆದಿದೆ, 15-4-98ರಂದು ಏನು ನಡೆದಿದೆ, 19-7-98ರಂದು ಏನು ನಡೆದಿದೆ, ಮುಂತಾಗಿ ಎಲ್ಲಾ ಮಾಹಿತಿಗಳು ಗೃಹ ಇಲಾಖೆಯಲ್ಲಿದೆ. ನಾವು ಆ ಮಾಹಿತಿಗಳನ್ನು ಸದನದಲ್ಲಿಡಲು ತಯಾರಾಗಿದ್ದೇವೆ. ಆದರೆ ಚರ್ಚೆ ಇರುವುದರಿಂದ ಆ ಮಾಹಿತಿಗಳು ಬೇಕಾಗಿಲ್ಲ ಎಂಬ ದೃಷ್ಟಿಯಿಂದ, ಚರ್ಚೆ ಇರುವುದರಿಂದ ಸದನ ಸಮಿತಿಯು ಬೇಕಾಗಿಲ್ಲ ಎಂದು ಹೇಳಿದ್ದೇವೆ. ನಾವು ನಾಳೆ, ಮುಂದಿನ ತಿಂಗಳು ಮಾತನಾಡೋಣವೆಂದು ಹೇಳಿಲ್ಲ, ಸೋಮವಾರದಿನವೇ ಮಾತುಕತೆ ಮಾಡೋಣ ಎಂದು ಹೇಳಿದ್ದೇನೆ. ಸಾಧ್ಯವಾದರೆ ಮುಖ್ಯಮಂತ್ರಿಯವರನ್ನು ಜೊತೆಯಲ್ಲಿಟ್ಟುಕೊಂಡು, ಗೃಹ ಇಲಾಖೆ, ಪೋಲೀಸ್ ಇಲಾಖೆ, ಜಿಲ್ಲಾಧಿಕಾರಿಯವರನ್ನು ಇಟ್ಟುಕೊಂಡು, ಒಂದು ವೇಳೆ ಸಿಎಂ ರವರು ಇಲ್ಲದಿದ್ದಲ್ಲಿ ಡೆಪ್ಯುಟಿ ಸಿಎಂರವರ ಜೊತೆಗೆ ಮಾತುಕತೆ ಮಾಡೋಣ. ಹೀಗೆ ಪ್ರಾಮಾಣಿಕವಾಗಿ

ಸಮಸ್ಯೆಯನ್ನು ಪರಿಹರಿಸಿಕೊಳ್ಳೋಣ ಎಂದು ಹೇಳಿದರೆ ಸಮಿತಿ ಮಾಡಿ ಎಂದು ಹೇಳುತ್ತೀರಲ್ಲಾ, ಇದು ಅರ್ಥವಿಲ್ಲ. ಸರಕಾರವು ಭರವಸೆ ಕೊಡದೇ ಉತ್ತರ ಕೊಡದಿದ್ದರೆ, ಸರ್ಕಾರ ಬಗೆಹರಿಸುವ ಮನಸ್ಸಿಲ್ಲ ಎಂಬ ಭಾವನೆಯನ್ನು ಹೊಂದಿದ್ದರೆ ತಾವುಗಳು ಹೇಳುವ ಹಾಗೆ ಸಮಿತಿಯು ಬೇಕಾಗುತ್ತದೆ. ಇಲ್ಲಿ ಹಾಗಿಲ್ಲವಲ್ಲಾ? ನಾವು ಮೀಟಿಂಗ್ ಮಾಡುವ ಬಗ್ಗೆ ಜಿಲ್ಲಾಧಿಕಾರಿಯವರಿಗೆ, ಜಿಲ್ಲಾ ಮಂತ್ರಿಯವರಾದ ರೇವಣ್ಣರವರಿಗೆ, ಪೋಲೀಸ್ ವರಿಷ್ಠಾಧಿಕಾರಿಯವರಿಗೆ, ಗೋಪಾಲ್‌ರವರಿಗೆ, ಮುಂತಾಗಿ ಎಲ್ಲರಿಗೂ ಸ್ವಯಂ ಪ್ರೇರಿತರಾಗಿ ನಾನೇ ಹೇಳಿಕಳುಹಿಸಿ ಕರೆಸಿ ಮೀಟಿಂಗ್ ಮಾಡಿದ್ದೇನೆ. 16ನೇ ತಾರೀಖಿನಂದು ಸೋಮವಾರ ಮಾತುಕತೆಗೆ ದಿನಾಂಕವನ್ನು ನಿಗದಿ ಮಾಡಿದ್ದೇವೆ. ಇಂಥ ವಿಚಾರವನ್ನು ವಿಳಂಬ ಮಾಡಬಾರದು ಎಂದು ನಮಗೂ ಕೂಡ ಗೊತ್ತಿದೆ.

(ಟ) ಭಟ್ಕಳದಲ್ಲಿ ನಡೆದ ಕೋಮು ಗಲಭೆ ಬಗ್ಗೆ

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಅಧ್ಯಕ್ಷರೇ, 1993ರಲ್ಲಿ ಭಟ್ಕಳದಲ್ಲಿ ನಡೆದಂಥ ಒಂದು ಕೋಮು ಗಲಭೆ ಬಗ್ಗೆ ರಾಜ್ಯದಲ್ಲಿ ಸಾಕಷ್ಟು ತಲ್ಲಣವಾಗಿ ಭಯದ ವಾತಾವರಣ ನಿರ್ಮಾಣವಾಗಿತ್ತು. ಸುಮಾರು 17 ಜನರು ಇದರಿಂದ ಸತ್ತಿದ್ದಾರೆ, ನೂರಾರು ಅಂಗಡಿಗಳು ಮನೆಗಳು ಲೂಟಿಗೊಳಗಾದವು, ಕೋಟ್ಯಾಂತರ ರೂಪಾಯಿಗಳಷ್ಟು ಹಾನಿ ಆಯಿತು. ಆ ಸಂದರ್ಭದಲ್ಲಿ ಇದರ ವಿಚಾರಣೆಗಾಗಿ ನ್ಯಾಯಮೂರ್ತಿ ಜಗನ್ನಾಥ ಶೆಟ್ಟಿಯವರ ವಿಚಾರಣಾ ಆಯೋಗವನ್ನು ನೇಮಕ ಮಾಡಿತು. ಆ ಕುರಿತು ಈಗಾಗಲೇ ಸಾಕಷ್ಟು ವಿಚಾರಗಳು ಬೆಳಕಿಗೆ ಬರುತ್ತಾ ಇವೆ. ಆ ಸಂದರ್ಭದಲ್ಲಿ ರಾಷ್ಟ್ರದ್ರೋಹಿಗಳು ಆಯುಧ, ನಾಡಬಾಂಬ್‌ಗಳನ್ನು ಬಳಕೆ ಮಾಡಿದ್ದರ ಬಗ್ಗೆ ರಾಜ್ಯಸರ್ಕಾರದ ಗಮನಕ್ಕೆ ಈಗಾಗಲೇ ಬಂದಿರಬಹುದು. ಗಲಭೆ ಉಂಟುಮಾಡಲು ರಾಷ್ಟ್ರದ್ರೋಹಿಗಳು ನಡೆಸಿದ ಕುಕೃತ್ಯ ಇದು ಎಂಬುದರ ಬಗ್ಗೆಯೂ ಸಾಕಷ್ಟು ಚರ್ಚೆಯಾಗಿದೆ. ಗಣೇಶ ವಿಸರ್ಜನೆ ಸಂದರ್ಭದಲ್ಲಿ ಕೆಲವು ವ್ಯಕ್ತಿಗಳು ಬೇಕೆಂದೇ ಮಾಡಿದ ಗಲಭೆ ಇದು. ಅದೇ ತರಹ ವಿದೇಶಿ ಮತ್ತು ಸ್ವದೇಶಿ ** ಈ ಕೆಲಸ ಮಾಡಿದ್ದರು ಎನ್ನುವಂತಹ ಅಂಶ....

ಶ್ರೀ ಸಯ್ಯದ್ ಜುಲ್ಫೀಕರ್ ಹಶ್ಮಿ: ನೀವು ** ಹಾಗೆ ಎನ್ನಬೇಡಿ. ಯಾವನು ಅಪರಾಧ ಮಾಡಿದ್ದಾನೋ ಅದು ನಿಮಗೆ ಗೊತ್ತಿದ್ದರೆ ಅವನ ಹೆಸರು ಹೇಳಿ. ದ್ರೋಹಿಗಳು ಎಲ್ಲಾ ಜಾತಿಯಲ್ಲೂ ಇದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ: ವಿದೇಶಿ ಮಾಲುಗಳು ಕಳ್ಳಸಾಗಾಣಿಕೆ ಅತಿ ದೊಡ್ಡ ಪ್ರಮಾಣದಲ್ಲಿ ಭಟ್ಕಳದಲ್ಲಿ ನಡೆದಿದೆ. ಅದು ಇನ್ನೂ ನಡೆಯುತ್ತಿದೆ. ಏತಕ್ಕೆ ಇದನ್ನು

** ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.